scan0037.jpg - Picasa Photo Viewer

# ಇಸ್ರೋ ಉಪಗ್ರಹ ನಿರ್ವಹಣೆಗೆ 3 ಕನ್ನಡತಿಯರು

ಚೆನ್ನೈ/ಬೆಂಗಳೂರು: ಭಾರತೀಯ ಬಾಹ್ಯಾಕಾಶ ಸಂಸ್ಥೆ (ಇಸ್ರೋ) ಇತಿಹಾಸದಲ್ಲಿ ಇದೇ ಮೊತ್ತ ಮೊದಲ ಬಾರಿಗೆ ಉಪಗ್ರಹವೊಂದನ್ನು ಮೂವರು ಮಹಿಳೆಯರ ನೇತೃತ್ವದ ತಂಡ ನಿರ್ವಹಿಸುತ್ತಿದೆ. ಅಂದಹಾಗೆ ಈ ಮೂವರೂ ಮಹಿಳೆಯರೂ ಕನ್ನಡದವರೇ ಎಂಬುದು ಮತ್ತೊಂದು ದಾಖಲೆ.

ಕಳೆದ ಶುಕ್ರವಾರ ಶ್ರೀಹರಿಕೋಟಾದಿಂದ ಉಡಾವಣೆಯಾದ ಜಿಸ್ಯಾಟ್-12 ಉಪಗ್ರಹದ ನಿರ್ವಹಣೆ, ನಿಯಂತ್ರಣ ಹಾಗೂ ಕಕ್ಷೆಗೆ ಸೇರಿಸುವ ಜವಾಬ್ದಾರಿಯನ್ನು ಕನ್ನಡತಿಯರಾದ ಇಸ್ರೋ ಯೋಜನಾ ನಿರ್ದೇಶಕಿ ಟಿ.ಕೆ. ಅನುರಾಧಾ, ಕಾಯಕ್ರಮ ನಿರ್ದೇಶಕಿ ಪ್ರಮೋದಾ ಹೆಗಡೆ ಹಾಗೂ ಕಾರ್ಯನಿರ್ವಹಣೆ ನಿರ್ದೇಶಕಿ ಎಸ್.ಪಿ. ಅನುರಾಧಾ ಅವರಿಗೆ ಇಸ್ರೋ ವಹಿಸಿದೆ. ▶ 11ನೇ ಪುಟಕ್ಕೆ

## ಇಸ್ರೋ ಮಹಿಳಾಮಣಿಗಳು

### ■ ಟಿ.ಕೆ.ಅನುರಾಧಾ,

ಪ್ರಾಜೆಕ್ಟ್ ಡೈರೆಕ್ಟರ್



ಹುಟ್ಟಿದ್ದು ಬೆಳೆದಿದ್ದು ಓದಿದ್ದು ಎಲ್ಲಾ ಬೆಂಗಳೂರಿನಲ್ಲಿ ಎಂಜಿನಿಯರಿಂಗ್ ಮುಗಿಸುತ್ತಿದ್ದಂತೆ ಇಸ್ರೋ ಸೇರಿದರು. 1982ರ ನವೆಂಬರ್‌ನಿಂದ ಇಸ್ರೋದ ವಿವಿಧ ಜವಾಬ್ದಾರಿಯುತ ಸ್ಥಾನಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಜಿಸ್ಯಾಟ್-12 ಉಪಗ್ರಹ ಉಡಾವಣೆಯ ನೇತೃತ್ವ ವಹಿಸಿದ್ದು ಇವರ ಹೆಗ್ಗಳಿಕೆ.

### ■ ಪ್ರಮೋದಾ ಹೆಗಡೆ,

ಮಿಷನ್ ಡೈರೆಕ್ಟರ್



ಉತ್ತರ ಕನ್ನಡದ ಕುಮಟಾ ತಾಲೂಕಿನ ಮೂರೂರಿನವರು ಹಟ್ಟಿಕೇರಿ ಎಂಬಲ್ಲಿ ಪ್ರಾಥಮಿಕ ಶಿಕ್ಷಣ ಮೂರೂರಿನಲ್ಲಿ ಹೈಸ್ಕೂಲ್ ಹಾಗೂ ಕುಮಟಾದ ಬಾಳಿಗಾ ಕಾಲೇಜಿನಲ್ಲಿ ಪಿಯುಸಿ ಓದಿದರು. ಹುಬ್ಬಳ್ಳಿಯಲ್ಲಿ ಎಂಜಿನಿಯರಿಂಗ್ ಬಳಿಕ ಇಸ್ರೋ ಸೇರಿದ ಅವರು 23 ವರ್ಷಗಳಿಂದ ಕರ್ತವ್ಯ ನಿರ್ವಹಿಸುತ್ತಿದ್ದಾರೆ.

### ■ ಎಸ್.ಪಿ. ಅನುರಾಧಾ,

ಆಪರೇಷನ್ಸ್ ಡೈರೆಕ್ಟರ್



10 ವರ್ಷಗಳಿಂದ ಇಸ್ರೋದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಎಸ್.ಪಿ. ಅನುರಾಧಾ ಮೂಲತಃ ಉಡುಪಿಯವರು. ಕೃಷ್ಣನ್, ಜಯಲಕ್ಷ್ಮೀ ದಂಪತಿಯ ಪುತ್ರಿ. ಕನ್ನಡ ಮಾಧ್ಯಮದಲ್ಲಿ ಪ್ರಾಥಮಿಕ ಶಿಕ್ಷಣ ಪಡೆದ ಇವರು ಕೇರಳದ ತ್ರಿಶೂರ್, ಕೊಲ್ಕತಾದಲ್ಲಿ ಉನ್ನತ ಶಿಕ್ಷಣ ಪಡೆದವರು. 2001ರಲ್ಲಿ ಇಸ್ರೋ ಸೇರಿದ್ದಾರೆ.